# 2022-23 ನೇ ಸಾಲಿನ MIDHನ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪ ಯೋಜನೆಯಡಿ ತೋಟಗಾರಿಕೆಯಲ್ಲಿ ಯಾಂತ್ರೀಕರಣ ಕಾರ್ಯಕ್ರಮದ ಮಾರ್ಗಸೂಚಿ

## I. ಕಾರ್ಯಕ್ರಮದ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ, ತೋಟಗಾರಿಕೆ ಯಾಂತ್ರೀಕರಣ ಕಾರ್ಯಕ್ರಮದಡಿ ರೈತ ಫಲಾನುಭವಿಗಳಿಗೆ ಟ್ರ್ಯಾಕ್ಟರ್, ಪವರ್ ಟಿಲ್ಲರ್ ಮತ್ತು ಸ್ವಯಂಚಾಲಿತ ಕೃಷಿ ಯಂತ್ರೋಪಕರಣಗಳಿಗೆ ಈ ಕೆಳಕಂಡಂತೆ ಸಹಾಯಧನವನ್ನು ನೀಡಲು ಅವಕಾಶವಿರುತ್ತದೆ.

## II. ಕಾರ್ಯಕ್ರಮದ ಉದ್ದೇಶಗಳು:

ತೋಟಗಾರಿಕೆಯಲ್ಲಿ ಮಾನವ ಶಕ್ತಿಯ ಮೇಲೆ ಅವಲಂಬನೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಯಾಂತ್ರೀಕರಣವನ್ನು ಉತ್ತೇಜಿಸಲು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾರ್ಗಸೂಚಿಯನ್ವಯ 20 PTO HP ಅಶ್ವಶಕ್ತಿಗಿಂತ ಕಡಿಮೆ ಸಾಮರ್ಥ್ಯವಿರುವ ಟ್ರ್ಯಾಕ್ಟರ್ ಮತ್ತು 8 ಅಶ್ವಶಕ್ತಿವರೆಗಿನ ಪವರ್ ಟಿಲ್ಲರ್ ಖರೀದಿಗಾಗಿ ಸಹಾಯಧನ ನೀಡುವ ಕಾರ್ಯಕ್ರಮವಿದ್ದು ಇದರಲ್ಲಿ 20 PTO HP ಅಶ್ವಶಕ್ತಿಗಿಂತ ಹೆಚ್ಚಿನ ಸಾಮರ್ಥ್ಯವಿರುವ ಟ್ರಾಕ್ಟರ್ ಗಳಿಗೆ ಸಹಾಯಧನ ನೀಡಲು ಅವಕಾಶವಿರುವುದಿಲ್ಲ.

ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ ಮತ್ತು ಮಧ್ಯಮ ವರ್ಗದ ರೈತರು ಹಾಗೂ ರೈತ ಮಹಿಳೆಯರಿಗೆ 20 PTO HP ಗಿಂತ ಕಡಿಮೆ ಸಾಮರ್ಥ್ಯದ ಟ್ರ್ಯಾಕ್ಟರ್ ಗಳಿಗೆ ಹಾಗೂ 8 BHP ವರೆಗಿನ ಪವರ್ ಟಿಲ್ಲರ್, ಸ್ವಯಂ ಚಾಲಿತ ತೋಟಗಾರಿಕೆ ಯಂತ್ರೋಪಕರಣಗಳಾದ ಸ್ಪ್ರೇಯರ್ (Knapsack/ foot operated sprayer and 20 PTO HP ಗಿಂತ ಕಡಿಮೆ ಸಾಮರ್ಥ್ಯದ tractor mounted/ operated sprayer) ಖರೀದಿಗಾಗಿ ಸಹಾಯಧನವನ್ನು ನೀಡಲು ಅವಕಾಶವಿರುತ್ತದೆ.

## III. ಕಾರ್ಯಕ್ರಮದ ಮುಖ್ಯ ಘಟಕಗಳು:

1. ತೋಟಗಾರಿಕೆ ಬೆಳೆಗಳ ಕೃಷಿಗೆ ಅನುಕೂಲವಾಗುವಂತಹ ಟ್ರ್ಯಾಕ್ಟರ್, ಟ್ರಿಲ್ಲರ್ ಮತ್ತು ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳ ಖರೀದಿಸಲು ಸಹಾಯಧನ ನೀಡುವುದು.
2. ಭೂಮಿ ಸಿದ್ಧತೆ, ಅಂತರ ಬೇಸಾಯ, ಸಸ್ಯ ಸಂರಕ್ಷಣೆ, ಗೊಬ್ಬರ, ತೋಟಗಾರಿಕೆ ಉತ್ಪನ್ನಗಳ ಮತ್ತು ಇತರೇ ಅವಶ್ಯಕ ಸಾಮಗ್ರಿಗಳನ್ನು ಸಾಗಿಸಲು ಹಾಗೂ ಬೆಳೆದ ಉತ್ಪನ್ನವನ್ನು ಸಾಗಾಣಿಕೆ ಮಾಡಿ, ಮಾರಾಟ ಮಾಡಲು ಅಗತ್ಯವಾದ ಟ್ರ್ಯಾಕ್ಟರ್, ಪವರ್ ಟಿಲ್ಲರ್ ಮತ್ತು ಟ್ರ್ಯಾಕ್ಟರ್ ಚಾಲಿತ ಇತರ ಅವಶ್ಯಕ ಉಪಕರಣಗಳನ್ನು ಖರೀದಿಸಲು ಸಹಾಯಧನ ನೀಡುವುದು.

## IV. ತಾಂತ್ರಿಕ ವೈಶಿಷ್ಟತೆ:

1. ರೈತರು ಖರೀದಿಸಲು ಇಚ್ಛಿಸುವ ಟ್ರ್ಯಾಕ್ಟರ್ ಅಥವಾ ಟಿಲ್ಲರ್ ಉತ್ತಮ ಗುಣಮಟ್ಟದ್ದಾಗಿರಬೇಕು.
2. ಖರೀದಿಸಿದ ಟ್ರ್ಯಾಕ್ಟರ್/ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳು ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ ಎಲ್ಲಾ ಕೆಲಸಗಳನ್ನು ನಿರ್ವಹಿಸಲು ಯೋಗ್ಯವಾಗಿರಬೇಕು

(೧೩)

V. **ಫಲಾನುಭವಿಗಳ ಅರ್ಹತೆ:**

1. ಫಲಾನುಭವಿಗಳು ರೈತರಾಗಿದ್ದು, ಜಮೀನು ಅವರ ಹೆಸರಿನಲ್ಲಿರಬೇಕು. ಫಲಾನುಭವಿಯು ತನ್ನ ಕುಟುಂಬದ (ತಂದೆ, ತಾಯಿ, ಹೆಂಡತಿ ಹಾಗೂ ಮಕ್ಕಳ) ಹೆಸರಿನಲ್ಲಿರುವ ಪಹಣಿ ನೀಡಿದ್ದಲ್ಲಿ ಅಥವಾ ಸದಸ್ಯರ ಜಂಟಿ ಖಾತೆಯಾಗಿದ್ದಲ್ಲಿ ಸಂಬಂಧಿಸಿದ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು ಮತ್ತು ಒಪ್ಪಿಗೆ ಪತ್ರಕ್ಕೆ ಕಡ್ಡಾಯವಾಗಿ ನೋಟರಿ (Notary) ಆಗಬೇಕು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳಿಂದ ದೃಢೀಕೃತ ವಂಶವೃಕ್ಷ ಲಗತ್ತಿಸಬೇಕು.
2. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ, ತನ್ನ ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.
3. ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
4. ಎಲ್ಲಾ ವರ್ಗದ ಫಲಾನುಭವಿಗಳು ಅಂದರೆ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪ ಸಂಖ್ಯಾತರು / ಸಣ್ಣ ಹಾಗೂ ಅತೀ ಸಣ್ಣ ರೈತರು ಹಾಗೂ ರೈತ ಮಹಿಳೆಯರು ಈ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.
5. ತೋಟಗಾರಿಕೆಯಲ್ಲಿ ಯಾಂತ್ರೀಕರಣ ಕಾರ್ಯಕ್ರಮದಲ್ಲಿ ಸಯಾಯಧನ ಪಡೆಯುವ ಫಲಾನುಭವಿಗಳು ಕಡ್ಡಾಯವಾಗಿ 1.00 ಹೆಕ್ಟೇರ್ (2.5 ಎಕರೆ) ಜಮೀನು ಹೊಂದಿದ್ದು ಕನಿಷ್ಠ 0.50 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆದಿರಬೇಕು.

ಮಲೆನಾಡು/ಕರಾವಳಿ ಪ್ರದೇಶಗಳಾದ ಕೊಡಗು (ಎಲ್ಲಾ ತಾಲ್ಲೂಕುಗಳು), ಉತ್ತರ ಕನ್ನಡ (ಎಲ್ಲಾ ತಾಲ್ಲೂಕುಗಳು), ದಕ್ಷಿಣ ಕನ್ನಡ (ಎಲ್ಲಾ ತಾಲ್ಲೂಕುಗಳು), ಉಡುಪಿ (ಎಲ್ಲಾ ತಾಲ್ಲೂಕುಗಳು), ಶಿವಮೊಗ್ಗ (ತೀರ್ಥಹಳ್ಳಿ, ಸಾಗರ, ಸೊರಬ, ಹೊಸನಗರ ತಾಲ್ಲೂಕುಗಳು), ಚಿಕ್ಕಮಗಳೂರು (ಚಿಕ್ಕಮಗಳೂರು, ಮೂಡಿಗೆರೆ, N.R.ಪುರ, ಶೃಂಗೇರಿ, ಕೊಪ್ಪ ತಾಲ್ಲೂಕುಗಳು), ಹಾಸನ (ಸಕಲೇಶಪುರ, ಬೇಲೂರು ತಾಲ್ಲೂಕುಗಳು) ಪ್ರದೇಶದ ಫಲಾನುಭವಿಯು ಕಡ್ಡಾಯವಾಗಿ ಹೊಂದಿರಬೇಕಾದ ಜಮೀನಿನ ಕನಿಷ್ಠ ಮಿತಿಯನ್ನು ಈ ಕೆಳಗಿನಂತೆ ನೀಡಲಾಗಿದೆ.

- ಫಲಾನುಭವಿಗಳು ಕಡ್ಡಾಯವಾಗಿ 0.40 ಹೆಕ್ಟೇರ್ ಜಮೀನು ಹೊಂದಿರಬೇಕು.
- ಫಲಾನುಭವಿ ಹೊಂದಿರುವ ಜಮೀನಿನಲ್ಲಿ ಕನಿಷ್ಠ 0.20 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಬೆಳೆದಿರಬೇಕು.

**ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಫಲಾನುಭವಿಗಳು ಕಡ್ಡಾಯವಾಗಿ ಹೊಂದಿರಬೇಕಾದ ಜಮೀನಿನ ಕನಿಷ್ಠ ಮಿತಿಯನ್ನು ಈ ಕೆಳಗಿನಂತೆ ನೀಡಲಾಗಿದೆ.**

- ಫಲಾನುಭವಿಗಳು ಕಡ್ಡಾಯವಾಗಿ 0.40 ಹೆಕ್ಟೇರ್ ಜಮೀನು ಹೊಂದಿರಬೇಕು.

➤ ಫಲಾನುಭವಿ ಹೊಂದಿರುವ ಜಮೀನಿನಲ್ಲಿ ಕನಿಷ್ಠ 0.20 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಬೆಳೆದಿರಬೇಕು.

6. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ಅಡಿಯಲ್ಲಿ ನರ್ಸರಿ ಸ್ಥಾಪಿಸಲು ಸಹಾಯಧನ ಪಡೆದವರಿಗೆ ಈ ಕಾರ್ಯಕ್ರಮದಡಿ, ಟ್ರ್ಯಾಕ್ಟರ್/ ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳು ಖರೀದಿಸಲು ಸಹಾಯಧನ ನೀಡುವಂತಿಲ್ಲ.

7. ಈಗಾಗಲೇ ಸರ್ಕಾರದ ವಿವಿಧ ಇಲಾಖೆಗಳ ಯೋಜನೆಯಡಿ ಟ್ರ್ಯಾಕ್ಟರ್ ಸಹಾಯಧನ ಪಡೆದಿರುವ ಕುಟುಂಬಕ್ಕೆ ಸಹಾಯಧನವನ್ನು ನೀಡುವಂತಿಲ್ಲ.

8. ಈ ಕಾರ್ಯಕ್ರಮದಡಿ ಖರೀದಿಸಿರುವ ಟ್ರ್ಯಾಕ್ಟರ್ / ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳಿಗೆ ಕೇಂದ್ರ / ರಾಜ್ಯ ಸರ್ಕಾರದ ಇತರೇ ಯೋಜನೆಗಳಡಿ ಯಾವುದೇ ಇಲಾಖೆಯಿಂದ ಈ ಹಿಂದೆ ಸಹಾಯಧನ ಪಡೆದಿರುವುದಿಲ್ಲವೆಂದು ದೃಢೀಕರಣ ಪಡೆದುಕೊಳ್ಳುವುದು ಹಾಗೂ ಸಹಾಯಧನ ಪಡೆದಿಲ್ಲದಿರುವುದಕ್ಕೆ NOC ಯನ್ನು ಲಗತ್ತಿಸುವುದು.

9. ಆದಾಯ ತೆರಿಗೆಯನ್ನು ಪಾವತಿಸುವ ರೈತರು ಸಹ ಈ ಸಹಾಯಧನಕ್ಕೆ ಅರ್ಹರಾಗಿರುತ್ತಾರೆ.

10. ಸಹಾಯಧನ ಪಡೆದಿರುವ ಟ್ರ್ಯಾಕ್ಟರ್/ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳನ್ನು ಕನಿಷ್ಠ 5 ವರ್ಷಗಳ ಕಾಲ ಬೇರೆಯವರಿಗೆ ಪರಭಾರೆ ಮಾಡಬಾರದು. ಉದ್ದೇಶದಂತೆ ಉಪಕರಣದ ಸದುಪಯೋಗ ಮಾಡಿಕೊಳ್ಳುವುದು, ಗ್ರಾಮದಲ್ಲಿನ ಇತರೆ ರೈತರಿಗೂ ಇದರ ಸೌಲಭ್ಯ ನೀಡಬೇಕು.

11. ಮಾರ್ಗಸೂಚಿಯಲ್ಲಿ ನಿಗಧಿಪಡಿಸಿದ ಜಮೀನಿಗಿಂತ ಕಡಿಮೆ ಜಮೀನು ಫಲಾನುಭವಿಯ ಹೆಸರಿನಲ್ಲಿ ಇದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಬಾರದು.

**VI. ಸಹಾಯಧನದ ವಿವರ:**

| ಕ್ರ ಸಂ | ಘಟಕಗಳು | ಘಟಕ ವೆಚ್ಚ (ರೂ. ಲಕ್ಷಗಳಲ್ಲಿ) | ಶೇ. ಸಹಾಯಧನ (%) | | ಸಹಾಯಧನದ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|---|---|
| | | | ಸಾಮಾನ್ಯ ವರ್ಗ | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳಾ ಫಲಾನುಭವಿಗಳಿಗೆ | |
| 1 | ಟ್ರ್ಯಾಕ್ಟರ್ | 3.00 | 25 | 35 | 0.75-1.00 |
| 2 | ಪವರ್ ಟಿಲ್ಲರ್ | 1.00 | 40 | 50 | 0.40-0.50 |
| 3 | ಸ್ಪ್ರೇಯರ್ (Knapsack/ foot operated sprayer) | 0.012 | 40 | 50 | 0.005-0.006 |
| 4 | ಸ್ಪ್ರೇಯರ್(tractor mounted/ operated sprayer – Below 20 HP) | 0.20 | 40 | 50 | 0.08-0.10 |

## VII. ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ:

1. ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಯಾಂತ್ರೀಕರಣ ಕಾರ್ಯಕ್ರಮದ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗಧಿ ಪಡಿಸಿರುವ ಗುರಿಯ ಮಿತಿಯಲ್ಲಿ ಪ್ರಕಟಣೆಯನ್ನು ಸ್ಥಳೀಯ ಪತ್ರಿಕೆಗಳ ಮುಖಾಂತರವಾಗಿ ವಿವಿಧ ಮಾಧ್ಯಮಗಳು ಹಾಗೂ ಜಿಲ್ಲೆಯ ಎಲ್ಲಾ ಕಛೇರಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.
2. ಪ್ರಕಟಣೆಯಲ್ಲಿ ಕಡ್ಡಾಯವಾಗಿ ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗಧಿಪಡಿಸಿದ ಗುರಿ ಮತ್ತು ನಿಗಧಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕರಿಸಿದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟವಾಗಿ ಮಾಹಿತಿ ಇರತಕ್ಕದ್ದು.
3. **ರೈತರು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿಗಳ ಅಂತಿಮ ಪಟ್ಟಿ ಮಾಡಿ ಮೊದಲು ಅರ್ಜಿ ಸಲ್ಲಿಸಿದವರಿಗೆ ಆದ್ಯತೆ ನೀಡುವುದು.**
4. **ಆಸಕ್ತಿಯುಳ್ಳ ರೈತರು ಅರ್ಜಿಯನ್ನು ಮೊದಲಿಗೆ ಈ ಕೆಳಕಂಡ ದಾಖಲಾತಿಗಳೊಂದಿಗೆ ತಾಲ್ಲೂಕು ಹಿಸತೋನಿ/ಸತೋನಿ ಕಛೇರಿಗೆ ಅಥವಾ ಆನ್ ಲೈನ್ ಮೂಲಕ FRUITS ತಂತ್ರಾಂಶದಲ್ಲಿ ಸಲ್ಲಿಸುವುದು.**
   - ➢ ನಿಗಧಿತ ನಮೂನೆಯಲ್ಲಿ ಫಲಾನುಭವಿಯ ಭಾವಚಿತ್ರ ಹಾಗೂ ಫಲಾನುಭವಿ ಭರ್ತಿ ಮಾಡಿ ಸಹಿ ಮಾಡಿದ ಅರ್ಜಿ.
   - ➢ ಜನವರಿ-2022ರ ನಂತರದ ಪಹಣಿ (RTC) (ಅಳವಡಿಸಿದ ಬೆಳೆ ಮತ್ತು ವಿಸ್ತೀರ್ಣ ನಮೂದಿಸಿರಬೇಕು).
5. ಜಿಲ್ಲೆಯ ತೋಉನಿ (ಜಿಪಂ) ರವರು ಮೇಲ್ಕಂಡ ಅರ್ಜಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಅನುಮೋದಿತ ಕ್ರಿಯಾ ಯೋಜನೆಯ ಮಿತಿಯಲ್ಲಿ ಫಲಾನುಭವಿಗೆ Letter of intentನ್ನು 5 ದಿನಗಳೊಳಗಾಗಿ ನೀಡುವುದು.
6. ಇಲಾಖೆ ರವರಿಂದ Letter of Intentನ್ನು ಪಡೆದ ನಂತರ ರೈತರು ಸದರಿ ಯೋಜನೆ ಅನುಸಾರ 45 ರಿಂದ 60 ದಿನಗಳ ಒಳಗಾಗಿ ಟ್ರ್ಯಾಕ್ಟರ್/ ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳನ್ನು ಖರೀದಿಸಿ ಈ ಕೆಳಕಂಡ ದಾಖಲಾತಿಗಳನ್ನು ಹಿಸತೋನಿ/ಸತೋನಿ ಕಛೇರಿಗೆ ಸಲ್ಲಿಸುವುದು.
   - ➢ ಜನವರಿ-2022ರ ನಂತರದ ಪಹಣಿ (RTC) (ಅಳವಡಿಸಿದ ಬೆಳೆ ಮತ್ತು ವಿಸ್ತೀರ್ಣ ನಮೂದಿಸಿರಬೇಕು).
   - ➢ ತಾಲ್ಲೂಕು ಅಧಿಕಾರಿ ಹಾಗೂ ಫಲಾನುಭವಿಯೊಂದಿಗೆ ಟ್ರ್ಯಾಕ್ಟರ್ ನ ಛಾಯಚಿತ್ರ ಹಾಗೂ ಟ್ರ್ಯಾಕ್ಟರ್ / ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳ ನೋಂದಣಿ ಸಂಖ್ಯೆಯು ಪ್ರಮುಖವಾಗಿ ಕಾಣುವ ಛಾಯಚಿತ್ರ (Photo).
   - ➢ ಟ್ರ್ಯಾಕ್ಟರ್ ನ Invoice Bill, ನೋಂದಣಿ ದೃಢೀಕರಣ (RC) ಮತ್ತು B-Extract ಲಗತ್ತಿಸಿರಬೇಕು.
   - ➢ ಫಲಾನುಭವಿಯು ಖರೀದಿಸಿರುವ ಟ್ರ್ಯಾಕ್ಟರ್ ಗೆ ಸಹಾಯಧನ ನೀಡಿರುವುದಿಲ್ಲ ಎಂಬುದಕ್ಕೆ ಕೃಷಿ/ಇತರೇ ಇಲಾಖೆಯಿಂದ NOC ಲಗತ್ತಿಸಬೇಕು.

- ಮುಚ್ಚಳಿಕೆ ಪತ್ರ.

7. ಟ್ರ್ಯಾಕ್ಟರ್ / ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳನ್ನು ಹೊಸದಾಗಿ 2022-23ನೇ ಸಾಲಿನಲ್ಲಿ ಇಲಾಖೆಯಿಂದ ಅನುಮತಿ ಪತ್ರ ಪಡೆದ ನಂತರ ಖರೀದಿಸಿರಬೇಕು ಹಾಗೂ ಟ್ರ್ಯಾಕ್ಟರ್ ನ ನೊಂದಣಿಯು ಏಪ್ರಿಲ್ – 2022ನಂತರ ಆಗಿರಬೇಕು.
8. ಪರಿಶೀಲನಾ ದೃಢೀಕರಣ ನಮೂನೆಯಲ್ಲಿ ಕಡ್ಡಾಯವಾಗಿ ಟ್ರ್ಯಾಕ್ಟರ್ ನೊಂದಣಿ ಸಂಖ್ಯೆ, ನೊಂದಣಿ ದಿನಾಂಕ, ತೋಟಗಾರಿಕೆ ಬೆಳೆಗಳ ವಿವರ ಹಾಗೂ ವಿಸ್ತೀರ್ಣವನ್ನು ನಮೂದಿಸಿರಬೇಕು.
9. ತಾಲ್ಲೂಕು ಹಿಸತೋನಿ/ಸತೋನಿ ರವರು ಅರ್ಜಿ ಹಾಗೂ ಮೇಲ್ಕಂಡ ಟ್ರ್ಯಾಕ್ಟರ್ ಗೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿದಾರರ ಹೆಸರುಗಳನ್ನು ಜೇಷ್ಠತಾ ವಹಿಯಲ್ಲಿ ನಮೂದಿಸಿ 5 ದಿನಗಳೊಳಗಾಗಿ ಸಹಾಯಧನ ಅರ್ಜಿಯನ್ನು ತೋಉನಿ (ಜಿಪಂ) ರವರಿಗೆ ಎಲ್ಲಾ ದಾಖಲಾತಿಗಳ ಸಹಿತ ಕಳುಹಿಸುವುದು. ತೋಟಗಾರಿಕೆ ಉಪ-ನಿರ್ದೇಶಕರು (ಜಿಪಂ) ರವರು ಜಿಲ್ಲೆಯ ಎಲ್ಲಾ ಹಿಸತೋನಿ/ಸತೋನಿ ರವರಿಂದ ಬಂದ ಅರ್ಜಿಗಳನ್ನು ಪರಿಶೀಲಿಸಿ ತಾಲ್ಲೂಕುವಾರು ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವುದು.
10. ರೈತರು ಸಲ್ಲಿಸುವ ಸಹಾಯಧನ ಅರ್ಜಿ ಮತ್ತು ದಾಖಲಾತಿಗಳನ್ನು ನಿಗಧಿತ ದಿನಾಂಕದೊಳಗೆ ಕಡ್ಡಾಯವಾಗಿ ಸಲ್ಲಿಸುವುದು ಹಾಗೂ ಪ್ರತಿ ಅರ್ಜಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ ರವರು ಕಡ್ಡಾಯವಾಗಿ ಶೇ. 100% ರಷ್ಟು ಖರೀದಿಸಿದ ಟ್ರ್ಯಾಕ್ಟರ್ ಟಿಲ್ಲರ್ ಯಂತ್ರೋಪಕರಣಗಳ ಪರಿಶೀಲನೆ ನಡೆಸಬೇಕು. ಸತೋಅ ರವರು ಪರಿಶೀಲಿಸಿದ ಟ್ರ್ಯಾಕ್ಟರ್ ಮತ್ತು ಟಿಲ್ಲರ್ ಗಳ ಪೈಕಿ ಕನಿಷ್ಠ ಶೇ. 50 ರಷ್ಟು ಟ್ರ್ಯಾಕ್ಟರ್ ಗಳನ್ನು ತಾಲ್ಲೂಕು ಸತೋನಿ/ಹಿಸತೋನಿ ರವರು ಪರಿಶೀಲಿಸಬೇಕು. ಸತೋಅ ರವರು ನಡೆಸಿರುವ ಪರಿಶೀಲನೆಯಲ್ಲಿ ಯಾವುದಾದರೂ ನ್ಯೂನತೆಗಳಿದ್ದರೆ ಅರ್ಜಿಯನ್ನು ತಿರಸ್ಕರಿಸುವುದಲ್ಲದೇ, ಅವರನ್ನೇ ನೇರ ಜವಾಬ್ದಾರರನ್ನಾಗಿ ಮಾಡಬೇಕು. **ಜಿಲ್ಲೆಯ ತೋಉನಿ (ಜಿಪಂ) ರವರು ಶೇ.10 ರಷ್ಟು** ಟ್ರ್ಯಾಕ್ಟರ್ ಟಿಲ್ಲರ್ ಯಂತ್ರೋಪಕರಣಗಳನ್ನು **ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಆದರಲ್ಲಿ ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಶೇ. 5 ರಷ್ಟು ಹಾಗೂ ಸತೋಅ ರವರು ಪರಿಶೀಲಿಸಿರುವ ಶೇ. 5 ರಷ್ಟು** ಟ್ರ್ಯಾಕ್ಟರ್ ಟಿಲ್ಲರ್ ಯಂತ್ರೋಪಕರಣಗಳನ್ನು **ಮರುಪರಿಶೀಲನೆ ಮಾಡುವುದು.** ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಅರ್ಜಿಗಳಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಹಿಸತೋನಿ / ಸತೋನಿ ರವರನ್ನು ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವುದು.**ವಿಭಾಗೀಯ ಜಂಟಿ ನಿರ್ದೇಶಕರು ರವರು ಶೇ. 5 ರಷ್ಟು** ಟ್ರ್ಯಾಕ್ಟರ್ ಟಿಲ್ಲರ್ ಯಂತ್ರೋಪಕರಣಗಳನ್ನು **ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಆದರಲ್ಲಿ ತೋಉನಿ (ಜಿಪಂ) ರವರು ಪರಿಶೀಲಿಸಿರುವ ಶೇ. 2 ರಷ್ಟು ಹಾಗೂ ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಶೇ. 3 ರಷ್ಟು** ಟ್ರ್ಯಾಕ್ಟರ್ ಟಿಲ್ಲರ್ ಯಂತ್ರೋಪಕರಣಗಳನ್ನು **ಮರುಪರಿಶೀಲನೆ ಮಾಡುವುದು. ಅಪರ ನಿರ್ದೇಶಕರು/ ಜಂಟಿ ನಿರ್ದೇಶಕರು ರವರು ಶೇ.1 ರಷ್ಟು** ಟ್ರ್ಯಾಕ್ಟರ್ ಟಿಲ್ಲರ್ ಯಂತ್ರೋಪಕರಣಗಳನ್ನು **ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಆದರಲ್ಲಿ ವಿಭಾಗೀಯ ಜಂಟಿ ನಿರ್ದೇಶಕರು ಪರಿಶೀಲಿಸಿರುವ ಶೇ.0.5 ರಷ್ಟು ಹಾಗೂ ತೋಉನಿ (ಜಿಪಂ) ರವರು ಪರಿಶೀಲಿಸಿರುವ ಶೇ.0.5 ರಷ್ಟು** ಟ್ರ್ಯಾಕ್ಟರ್ ಟಿಲ್ಲರ್ ಯಂತ್ರೋಪಕರಣಗಳನ್ನು **ಮರುಪರಿಶೀಲನೆ ಮಾಡುವುದು.**

ಮೇಲಿನ ಎಲ್ಲಾ ಅಧಿಕಾರಿಗಳು ತಮ್ಮ ಸ್ಥಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ Photo ಗಳನ್ನು ತೆಗೆದು ಇಲಾಖೆಯ ವೆಬ್ ಸೈಟ್ ನಲ್ಲಿ upload ಮಾಡುವುದು.

11. ರೈತರು ಬೆಳೆಯನ್ನು ಪಹಣಿಯಲ್ಲಿ ನಮೂದಿಸದೇ ಇರುವ ಪಕ್ಷದಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿ (RSK) ಯಿಂದ ಬೆಳೆಯನ್ನು ದೃಢೀಕರಿಸಿದ ಅರ್ಜಿಗಳನ್ನು ಸಹಾಯಧನಕ್ಕೆ ಪರಿಗಣಿಸುವುದು.

12. ಟ್ರ್ಯಾಕ್ಟರ್/ ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳನ್ನು ಖರೀದಿಸಲು ತೋಟಗಾರಿಕೆ ಉಪನಿರ್ದೇಶಕರ ಕಛೇರಿಯಿಂದ ಫಲಾನುಭವಿಗೆ ನೀಡಿರುವ ಅನುಮತಿ ಪತ್ರವನ್ನು ಲಗತ್ತಿಸಿರುಬೇಕು.

13. ಫಲಾನುಭವಿ ಹಾಗೂ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿ ತಾಲ್ಲೂಕು ಅಧಿಕಾರಿಯೊಂದಿಗಿನ ಟ್ರ್ಯಾಕ್ಟರ್ / ಟ್ರ್ಯಾಕ್ಟರ್ ಚಾಲಿತ ಕೃಷಿ ಉಪಕರಣಗಳ ಛಾಯ ಚಿತ್ರವನ್ನು ಕಡ್ಡಾಯವಾಗಿ ಲಗತ್ತಿಸಿರಬೇಕು ಹಾಗೂ ಛಾಯ ಚಿತ್ರ (Photo) ದಲ್ಲಿ ಟ್ರ್ಯಾಕ್ಟರ್ ನ ನೋಂದಣಿ ಸಂಖ್ಯೆಯ ಪ್ರಮುಖವಾಗಿ ಕಾಣುವಂತೆ ಇರಬೇಕು.

14. ಕ್ರಮ ಸಂಖ್ಯೆ (VII) (7), (8), (9). (10), (11), (12) ರಲ್ಲಿನ ಅಂಶಗಳನ್ನು ಸೇರಿಸಿಕೊಂಡು ರೂ. 100/-ಗಳ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು.

15. ಮಂಜೂರಾತಿಗಾಗಿ ಸಲ್ಲಿಸುವ ದಾಖಲಾತಿಗಳ ನಕಲು ಪ್ರತಿಗೆ ಕಡ್ಡಾಯವಾಗಿ ದಿನಾಂಕದೊಂದಿಗೆ RSK ಅಧಿಕಾರಿ / ತಾಲ್ಲೂಕು ಅಧಿಕಾರಿಗಳು ದೃಢೀಕರಿಸಬೇಕು ಇಲ್ಲದಿದ್ದಲ್ಲಿ ಪ್ರಸ್ತಾವನೆಯನ್ನು ತಿರಸ್ಕರಿಸಲಾಗುವುದು.

## VIII. ಅನುಮೋದನೆ:

ತಾಲ್ಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಅಗತ್ಯವಾದ ಎಲ್ಲಾ ದಾಖಲಾತಿಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ಅರ್ಹತೆ ಇದ್ದಲ್ಲಿ ಮಾತ್ರ ಪ್ರತಿಯೊಂದು ದಾಖಲಾತಿಗಳನ್ನು ಪರಿಶೀಲಿಸಿ ಚೆಕ್ ಲಿಸ್ಟ್ ನೊಂದಿಗೆ ಮಂಜೂರಾತಿಗಾಗಿ ತೋಉನಿ ರವರಿಗೆ ಮಂಡಿಸುವುದು. ಅರ್ಹತೆ ಹೊಂದಿಲ್ಲದ ನಿಗಧಿಪಡಿಸಿದ ಸಮಯದ ನಂತರ ವಿಳಂಬವಾಗಿ ಅಥವಾ ಅಪೂರ್ಣವಾದ ಪ್ರಸ್ತಾವನೆಗಳನ್ನು ಸಲ್ಲಿಸಿದಲ್ಲಿ ಸಂಬಂಧಪಟ್ಟ ತಾಲ್ಲೂಕಿನ ರಾಷ್ಟ್ರೀಯ ತೋಟಗಾರಿಕೆ ಇಲಾಖೆಯ ಸಹಾಯಕ ತೋಟಗಾರಿಕೆ ನಿರ್ದೇಶಕರವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಲು ಶಿಫಾರಸ್ಸು ಮಾಡಬೇಕು. ಜಿಲ್ಲಾ ತೋಉನಿ (ಜಿಪಂ) ರವರು ಎಲ್ಲಾ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ ಖಾತರಿಪಡಿಸಿಕೊಂಡು ಸಹಾಯಧನ ಮಂಜೂರು ಮಾಡಬೇಕು.

## IX. ಸಹಾಯಧನ ವಿತರಣೆ ಹಾಗೂ ಅನುಸರಿಸಬೇಕಾದ ಕ್ರಮಗಳು:

1. ಜಿಲ್ಲೆಯ ತೋಉನಿ (ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಹಿಸತೋನಿ ನೀಡಿರುವ ಟ್ರ್ಯಾಕ್ಟರ್ ಖರೀದಿಯ ವರದಿಯನ್ನು ಪರಿಶೀಲಿಸಿದ ನಂತರ, ಅರ್ಹ ಇದ್ದಲ್ಲಿ ಮಾತ್ರ ಸಹಾಯಧನ ಮೊತ್ತವನ್ನು ಬಿಡುಗಡೆ ಮಾಡುವುದು.

2. ಫಲಾನುಭವಿಯು ಸಹಾಯಧನ ಪಡೆದಿರುವ ಬಗ್ಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಲಾಂಛನ (LOGO) ದೊಂದಿಗೆ ಸಂಕ್ಷಿಪ್ತ ವಿವರವುಳ್ಳ **ನಾಮಫಲಕವನ್ನು** ಕಡ್ಡಾಯವಾಗಿ ಟ್ರ್ಯಾಕ್ಟರ್ ನ ಮೇಲೆ ಪ್ರದರ್ಶಿಸಬೇಕು.

3. ಫಲಾನುಭವಿಯ ಸಹಾಯಧನವನ್ನು ನಿಯಮಾನುಸಾರ ಬ್ಯಾಂಕ್ ಉಳಿತಾಯ ಖಾತೆಗೆ ಅಥವಾ ಫಲಾನುಭವಿಯು ಟ್ರ್ಯಾಕ್ಟರ್ ಖರೀದಿಗೆ ಸಾಲ ಪಡೆದಿದ್ದಲ್ಲಿ ತೆಗೆದುಕೊಂಡಿರುವ ಟ್ರ್ಯಾಕ್ಟರ್ ಸಾಲದ ಖಾತೆಗೆ/ಬ್ಯಾಂಕಿನ ಉಳಿತಾಯ ಖಾತೆಗೆ ಜಮಾ ಆಗುವಂತೆ ಸಂಬಂಧಪಟ್ಟ ಬ್ಯಾಂಕ್ ಶಾಖೆಗೆ ಬಿಡುಗಡೆ ಮಾಡುವುದು.

## X. ಆರ್ಥಿಕ ಪ್ರತ್ಯಾ ಯೋಜನೆ (Delegation of Power):

ಈ ಕಾರ್ಯಕ್ರಮದಲ್ಲಿ ಮಾರ್ಗಸೂಚಿಯಂತೆ ಸಹಾಯಧನ ಮಂಜೂರು ಮಾಡಲು ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ-3ಟಿಎಫ್ ಪಿ2018 ದಿನಾಂಕ:14.5.2018ರ ರನ್ವಯ ಕಾಲ ಕಾಲಕ್ಕೆ ಪರಿಷ್ಕೃತವಾಗುವ ಪ್ರದತ್ತವಾದ ಆರ್ಥಿಕ ಪ್ರತ್ಯಾಧಿಕಾರವನ್ನು ಅನುಸರಿಸುವುದು ಹಾಗೂ ಆರ್ಥಿಕ ಇಲಾಖೆಯ ಆರ್ಥಿಕ ಪ್ರತ್ಯಾಯೋಜನೆಯ ಮಾರ್ಗಸೂಚಿಯನ್ನು ಪಾಲಿಸುವುದು.

## XI. ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು (Reporting and documentation):

1. ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಇ-ಮೇಲ್ ಮೂಲಕ ತಿಂಗಳ 2ನೇ ದಿನಾಂಕದ ಒಳಗಾಗಿ ತಪ್ಪದೇ KSHMA ಕಛೇರಿಗೆ ಸಲ್ಲಿಸುವುದು.
2. ಟ್ರ್ಯಾಕ್ಟರ್ / ಟಿಲ್ಲರ್ ಚಾಲಿತ ಕೃಷಿ ಉಪಕರಣಗಳ ಸಹಾಯಧನ ಮಂಜೂರಾತಿಗಾಗಿ ಜನವರಿ – 2022ರ ನಂತರ ಬಂದ ಅರ್ಜಿಗಳನ್ನು ಪುರಸ್ಕರಿಸದೆ, ಸಂಬಂಧಿಸಿದ ತಾಲ್ಲೂಕುಗಳಿಗೆ ಹಿಂತಿರುಗಿಸಬೇಕು.
   ಜಿಲ್ಲೆಗೆ ನಿಗಧಿಪಡಿಸಿದ ಗುರಿಗಳು ಮೀರಿದ್ದಲ್ಲಿ, ಮಿಷನ್ ನಿರ್ದೇಶಕರ ಅನುಮತಿ ಪಡೆಯದೇ ಹೆಚ್ಚಿನ ಪ್ರಸ್ತಾವನೆಗಳನ್ನು ಮಂಜೂರಾತಿ ಮಾಡಬಾರದು.
3. **ವಾರ್ಷಿಕ ಬಿಡುಗಡೆಯಾಗಿರುವ ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಭರಿಸಲು ಕ್ರಮಕೈಗೊಳ್ಳುವುದು. ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಭರಿಸಲು ಸಾಧ್ಯವಾಗದಿದ್ದಲ್ಲಿ 3ನೇ ತ್ರೈಮಾಸಿಕದ (3rd trimester) ಒಳಗಾಗಿ ಅನುದಾನದ ಬೇಡಿಕೆಯನ್ವಯ ಅಂತರ ಘಟಕಗಳಲ್ಲಿ ಮಾರ್ಪಾಡುಗಳನ್ನು ನಿರ್ದೇಶನಾಲಯದಿಂದ ಅನುಮೋದನೆ ಪಡೆಯುವುದು. ತದನಂತರ ಯಾವುದೇ ಮಾರ್ಪಾಡುಗಳನ್ನು ಪರಿಗಣಿಸಲಾಗುವುದಿಲ್ಲ.**
4. ಎಲ್ಲಾ ಫಲಾನುಭವಿಗಳನ್ನೊಳಗೊಂಡ ಜಿಪಿಎಸ್ ಫೋಟೋಗಳನ್ನು ಪ್ರತಿ ತಿಂಗಳ ಅಂತ್ಯದಲ್ಲಿ ತಪ್ಪದೇ ಇಲಾಖಾ ವೆಬ್ ಸೈಟ್ ನಲ್ಲಿ ಅಳವಡಿಸಲು ಅಗತ್ಯ ಕ್ರಮವಹಿಸುವುದು.
5. ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ ಕಾರ್ಯನಿರ್ವಾಹಕ ನಿರ್ದೇಶಕರು, KSHMA ಮತ್ತು ತೋಟಗಾರಿಕೆ ನಿರ್ದೇಶಕರು ಮಾಹಿತಿ ಕೇಂದ್ರ ರವರಿಗೆ ಕಳುಹಿಸುವುದು.

**ಮಿಷನ್ ನಿರ್ದೇಶಕರು**
**ಮತ್ತು**
**ತೋಟಗಾರಿಕೆ ನಿರ್ದೇಶಕರು**